ದಿನಾಂಕಃ 14.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ **1** ರಿಂದ **6** ನೇ ಪ್ರತಿವಾದಿಗಳ ಪರ ವಕೀಲರಿಂದಃ

10. ನನ್ನ ತಂದೆ ದಿಃ 26.02.1975 ರಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿ. 1975 ರಿಂದ 1988 ರವರೆಗೆ ಯಾರು ದಾವಾ ಸ್ವತ್ತಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂಂದು ಹೇಳಲು ಆಗುತ್ತದಾ ಎಂದರೆ ಸಾಕ್ಷಿ ನಾವೆ ಮಾಡುತ್ತಿದ್ದೆವು ಎನ್ನುತ್ತಾರೆ. ನಮ್ಮ ಸಂಭಂದಿಕರ ಕಡೆಯಿಂದ ಸಾಗುವಳಿ ಮಾಡಿಸುತ್ತಿದ್ದೆವು. ಅವರ ಹೆಸರು ಪ್ರಹಲ್ಲಾದಪ್ಪ ಚನ್ನಬಸಪ್ಪ ನಾವಿ. ಅವರು ಮೃತಪಟ್ಟಿದ್ದಾರೆ. ಅವರು ಯಾವಾಗ ಮೃತಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರ ಮರಣ ಉತಾರವನ್ನು ಹಾಜರು ಪಡಿಸಿಲ್ಲ. ಅವರು ಮಮದಾಪೂರದಲ್ಲಿಯೇ ವಾಸವಿದ್ದರು. ಅವರು 1975 ರಿಂದ 1988 ರವರೆಗೆ ದಾವಾ ಸ್ವತ್ತನಲ್ಲಿ ಸಾಗುವಳಿ ಮಾಡಿದ್ದಾರೆ. ಈ ರೀತಿ ಸಾಗುವಳಿ ಮಾಡುವುದಕ್ಕೆ ಯಾವುದೇ ಕರಾರು ಪತ್ರ ಮತ್ತು ಕಾಗದ ಪತ್ರ ಇರುವುದಿಲ್ಲ. ಪ್ರಹಲ್ಲಾದಪ್ಪ ಚನ್ನಬಸಪ್ಪ ನಾವಿರವರು ಸಾಗುವಳಿ ಮಾಡುತ್ತಿದ್ದರು ಎಂದು ನನ್ನ ವಾದಪತ್ರ ಹಾಗೂ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ಅವರ ಮಗ ಪಂಚನಾಯಕನಟ್ಟಿಯಲ್ಲಿ ವಾಸವಿದ್ದಾರೆ. ಅವರು ಎಷ್ಟು ವರ್ಷದಿಂದ ಅಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ರೀತಿ ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ನನ್ನ ಬಾಯಿ ಹೇಳಿಕೆಯನ್ನು ಹೊರತು ಪಡಿಸಿ ಬೇರೆ ದಾಖಲೆಗಳು ಇಲ್ಲ ಎಂದರೆ ಸರಿ.

12. 1998 ರಿಂದ 2014 ವರೆಗೆ ನನ್ನ ತಮ್ಮ ವಿಜಯಕುಮಾರ ಬಸವಂತಪ್ಪ ಮಮಾದಾಪೂರರವರು ದಾವಾ ಸ್ವತ್ತಿನ ಸಾಗುವಳಿ ಮಾಡುತ್ತಿದ್ದರು. ಆ ರೀತಿ ಅವರು ಸಾಗುವಳಿ ಮಾಡುತ್ತಿದ್ದ ಬಗ್ಗೆ ತೋರಿಸಲು ದಾಖಲೆಗಳು ನನಗೆ ತಿಳಿದುಮಟ್ಟಿಗೆ ಇಲ್ಲ. ಅವರೇ ಸಾಗುವಳಿ ಮಾಡುತ್ತಿದ್ದರು ಎಂದು ತೋರಿಸಲು ಎತ್ತು, ಚಕ್ಕಡಿಗಳು ಇಲ್ಲ. ನನ್ನ ತಮ್ಮ ಯಾರ ಕಡೆಯಿಂದ ಒಕ್ಕಲುತನ ಮಾಡಿಸುತ್ತಿದ್ದರು ಎಂದು ನಾನು ಗೋಕಾಕ್‌ನಲ್ಲಿ

ಇದ್ದೆ ನನಗೆ ಗೊತ್ತಿಲ್ಲ. 1998 ರಿಂದ 2014 ವರೆಗೆ ನನ್ನ ತಮ್ಮ ವಿಜಯಕುಮಾರ ಬಸವಂತಪ್ಪರವರು ಸಾಗುವಳಿ ಮಾಡುತ್ತಿದ್ದರು ಎಂದು ನನ್ನ ವಾದ ಪತ್ರದಲ್ಲಾಗಲೀ, ಅಥವಾ ಸಾಕ್ಷ್ಯಪ್ರಮಾಣ ಪತ್ರದಲ್ಲಾಗಲೀ ನಮೂದು ಇಲ್ಲ ಎಂದರೆ ಸರಿ. ನಾನು ಹೇಳುವ ರೀತಿಯಲ್ಲಿ ಪ್ರಹಲ್ಲಾದಪ್ಪ ಚನ್ನಬಸಪ್ಪ ನಾವಿ ಆಗಲಿ ನನ್ನ ತಮ್ಮ ವಿಜಯಕುಮಾರ ಆಗಲಿ ದಾವಾ ಸ್ವತ್ತು ಸಾಗುವಳಿ ಮಾಡುತ್ತಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2014 ರಲ್ಲಿ ನಿಂಗಪ್ಪ ಮಾರುತಿ ಸಾಯಣ್ಣವರ್ ರವರಿಗೆ ಬಾಯಿಮಾತಿನಲ್ಲಿ ಲಾಭಾಂಶದ ಅರ್ಧಭಾಗ ನನಗೆ ಕೊಡಲು ಕರಾರು ಮಾಡಿಕೊಂಡು ಅವರಿಗೆ ಕೊಟ್ಟಿದ್ದೇನೆ. ನಾನು ಲಿಖಿತವಾಗಿ ಕರಾರು ಮಾಡಿಕೊಳ್ಳಲು ತೊಂದರೆ ಇರಲಿಲ್ಲ. ಬಾಯಿ ಕರಾರು ಮಾಡಿಕೊಳ್ಳುವಾಗ ಹಿರಿಯರು ಯಾರು ಇರಲಿಲ್ಲ. ಇಷ್ಟು ವರ್ಷದವರೆಗೆ ಎಂದು ಕರಾರು ಮಾಡಿಕೊಳ್ಳಲಿಲ್ಲ, ಅವರು ಲಾಭಾಂಶ ಕೊಡುವುದನ್ನು ನಿಲ್ಲಿಸುವವರೆಗೆ ಎಂದು ಮಾತನಾಡಿಕೊಂಡಿದ್ದೆವು.

13. ಒಂದು ವರ್ಷ ಒಂದು ಚೀಲ ಜೋಳ ಕೊಟ್ಟರು, ಮತ್ತೊಂದು ವರ್ಷ 50 ಸಾವಿರ ಹಣವನ್ನು ನನ್ನ ತಮ್ಮನಿಗೆ ಕೊಟ್ಟಿದ್ದಾರೆ. 2014 ರಲ್ಲಿ ಕರಾರು ಮಾಡಿಕೊಂಡ ದಿನ ಮತ್ತು ತಿಂಗಳು ಗೊತ್ತಿಲ್ಲ. 1975 ರಿಂದ 1988 ರವರೆಗೆ 1 ರಿಂದ 6 ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1988 ರಿಂದ ಇವತ್ತಿನವರೆಗೂ ಪ್ರತಿವಾದಿಗಳೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈಗ ದಾವಾ ಸ್ವತ್ತಿನಲ್ಲಿ ಯಾರು ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿ 2014 ರಿಂದ ಇಲ್ಲಿಯವರೆಗೆ ಸಾಯಣ್ಣವರ್‌ರವರೇ ಸಾಗುವಳಿ ಮಾಡುತ್ತಿದ್ದಾರೆ. 1975 ರಿಂದ 2020 ವರೆಗೆ ಯಾರ ಮೇಲೂ ನಾನು ಕ್ರಮ ಕೈಗೊಂಡಿಲ್ಲ ಎಂದರೆ ಸರಿ. ಅದರ ಅವಶ್ಯಕತೆ ಇರಲಿಲ್ಲ. ಅವಶ್ಯಕತೆ ಬಂತು ಈ ದಾವೆ ಸಲ್ಲಿಸಿದ್ದೇನೆ. 1975 ರಿಂದ 2014 ರವರೆಗೆ ನಾವು ಸಾಗುವಳಿ ಮಾಡಿಸುತ್ತಿದ್ದೆವು ಎಂದು ತೋರಿಸಲು ಯಾವುದೇ ದಾಖಲೆಗಳು ಮತ್ತು ತೆರಿಗೆ ಪಾವತಿ ರಸೀದಿಗಳು ನನ್ನ ಬಳಿ ಇಲ್ಲ. 2014 ರಲ್ಲಿ ಬಂದಿದ ಲಾಭದಲ್ಲಿ ಅರ್ಧ ಭಾಗ ಕೊಡುವ ಶರತ್ತಿಗೆ ಒಳಪಟ್ಟು ಸಾಯಣ್ಣವರ್

ರವರ ಜೊತೆಯಲ್ಲಿ ಲಿಖಿತವಾಗಿ ಕರಾರು ಮಾಡಿಕೊಳ್ಳಲು ನಿಮಗೇನೂ ತೊಂದರೆ ಇರಲ್ಲಿಲ್ಲ ಎಂದರೆ ಸಾಕ್ಷಿ ಯಾವುದೇ ದಾಖಲೆ ಮಾಡಿಕೊಳ್ಳಲಿಲ್ಲ ಎನ್ನುತ್ತಾರೆ. 1975 ರಿಂದ ಇಲ್ಲಿಯವರೆಗೆ ನಾನಾಗಲಿ, ನನ್ನ ಅಣ್ಣ ತಮ್ಮಂದಿರಾಗಲಿ, ನಮ್ಮ ಮನೆಯ ಬೇರೆ ಸದಸ್ಯರಾಗಲಿ ದಾವಾ ಸ್ವತ್ತನ್ನು ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ.

14. 2013 ರಲ್ಲಿ ಪೈಪ್‌ಲೈನ್ ಹಾಕಿದ್ದೇವೆ. ದಿನ ಮತ್ತು ತಿಂಗಳು ಗೊತ್ತಿಲ್ಲ. ತಪಸಿ ಹಳ್ಳದಿಂದ ಪೈಪ್‌ಲೈನ್ ಹಾಕಿದ್ದೇವೆ. ಅದನ್ನು ಮಾಡಿಸುವಾಗ ಯಾವುದೇ ಎಸ್ಟಿಮೇಶನ್ ಮಾಡಿಸಿದ ಬಗ್ಗೆ ದಾಖಲೆಗಳು ನನ್ನ ಬಳಿ ಇಲ್ಲ ನನ್ನ ಸಹೋದರನ ಬಳಿ ಇವೆ. ಪೈಪ್‌ಲೈನ್ ಮಾಡಿಸಲು ತಹಶೀಲ್ದಾರ್‌ರವರಿಂದ ಪರವಾನಗಿ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಅದು ನನ್ನ ತಮ್ಮನಿಗೆ ಬಿಟ್ಟಿದ್ದು ಎನ್ನುತ್ತಾರೆ. ಈ ಕೇಸಿನ ಎಲ್ಲಾ ವಿಚಾರಗಳು ನಿಮ್ಮ ತಮ್ಮನಿಗೆ ಮಾತ್ರ ಗೊತ್ತಿದೆ ಎಂದರೆ ಸಾಕ್ಷಿ ಪೈಪ್‌ಲೈನ್ ವಿಚಾರ ಮಾತ್ರ ಆತನಿಗೆ ಗೊತ್ತಿದೆ ಉಳಿದ ಎಲ್ಲ ವಿಚಾರಗಳು ನನಗೆ ಗೊತ್ತಿದೆ ಎನ್ನುತ್ತಾರೆ. ಉತಾರದಲ್ಲಿ ಪೈಪ್‌ಲೈನ್ ಇದ್ದ ಬಗ್ಗೆ ದಾಖಲು ಮಾಡಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನನ್ನ ತಮ್ಮನಿಗೆ ಗೊತ್ತು ಎನ್ನುತ್ತಾರೆ. ಪೈಪ್‌ಲೈನ್ ನಾವು ಮಾಡಿಸಿಲ್ಲ ಅದನ್ನು ಸಾಯಣ್ಣನವರ್‌ರವರು ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ದಾವೆಗೆ ಅನುಕೂಲವಾಗಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಕಬ್ಬು ಬೆಳೆಯುತ್ತೇವೆ ಎಂದು ಸಾಕ್ಷಿ ಮುಂದುವರೆದು ಈಗ ಅರ್ಧ ಜಮೀನಿನಲ್ಲಿ ಸದಕದ ಇನ್ನುಳಿದ ಅರ್ಧ ಜಮೀನಿನಲ್ಲಿ ಗೋವಿನ ಜೋಳ ಬೆಳೆಯುತ್ತೇವೆ ಎನ್ನುತ್ತಾರೆ. ಪೈಪ್‌ಲೈನ್ ಹಾಕಲು ಹಣ ಖರ್ಚಾಗಿರುವ ಬಗ್ಗೆ ತೋರಿಸಲು ದಾಖಲೆಗಳನ್ನು ನಾನು ಹಾಜರು ಪಡಿಸಿಲ್ಲ. ನಾನು 2014 ರಲ್ಲಿ ಅವರಿಗೆ ಸಾಗುವಳಿ ಮಾಡಲು ಕೊಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ನಾವೆಲ್ಲರೂ ವಿದ್ಯಾವಂತರಾಗಿದ್ದು, ಸಾಮಾನ್ಯ ಕಾನೂನಿನ ಜ್ಞಾನ ಎಲ್ಲರಿಗೂ ಇದೆ ಎಂದರೆ ಸರಿ. ದಾವಾ ಸ್ವತ್ತನ್ನು ಪ್ರತಿವಾದಿಗಳನ್ನು ಬಿಟ್ಟು ತಪಸಿ ಗ್ರಾಮದವರು ಬೇರೆ ಯಾರು ಸಾಗು ಮಾಡಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ